ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ
ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಜಿಎಲ್.5/234(1)/2019-20 ದಿನಾಂಕ: 23ನೇ ಮಾರ್ಚ್ 2020

# ಸುತ್ತೋಲೆ

ವಿಷಯ: ದೇಶಾದ್ಯಂತ ಹರಡುತ್ತಿರುವ Covid-19 ವೈರಾಣುವಿನ ಹರಡುವಿಕೆಯನ್ನು ತಡೆಗಟ್ಟುವ ಕ್ರಮಗಳ ಬಗ್ಗೆ.

ಉಲ್ಲೇಖ: ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 139 ಯಎನ್ಇ 2020 ದಿನಾಂಕ: 21-03-2020.

*****

ದೇಶಾದ್ಯಂತ ಹರಡುತ್ತಿರುವ Covid-19 ವೈರಾಣುವಿನ ಹರಡುವಿಕೆಯನ್ನು ತಡೆಗಟ್ಟಲು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯಗಳು ಹಾಗೂ ಅವುಗಳ ಅಧೀನಕ್ಕೊಳಪಡುವ ಕಾಲೇಜು, ವಿಭಾಗ ಹಾಗೂ ಸಂಸ್ಥೆಗಳು ಅರಿವು ಮೂಡಿಸುವ ಸಲುವಾಗಿ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಈ ಕೆಳಕಂಡ ಮಾರ್ಗಸೂಚಿ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಲು ಈ ಮೂಲಕ ಸೂಚಿಸಿದೆ ಹಾಗೂ **ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕ/ಅಧ್ಯಾಪಕೇತರ ಉದ್ಯೋಗಿಗಳಿಗೆ ದಿನಾಂಕ: 23-03-2020ರ ಅಪರಾಹ್ನದಿಂದ 31-03-2020 ರವರೆಗೆ ರಜೆಯನ್ನು ಘೋಷಿಸಲಾಗಿದೆ. ಆದರೆ, ತುರ್ತು ಸಂದರ್ಭದಲ್ಲಿ ಕಾರ್ಯನಿರ್ವಾಹಕರುಗಳು ಕೇಂದ್ರ ಸ್ಥಾನದಲ್ಲಿದ್ದು, ಬಟವಾಡೆ ಅಧಿಕಾರಿಗಳು ದೂರವಾಣಿ ಮುಖಾಂತರ ತಿಳಿಸಿದಾಗ, ಹಾಜರಾಗಿ ಕಛೇರಿ ಕಾರ್ಯಕೆಲಸಗಳನ್ನು ನಿರ್ವಹಿಸಲು ಸೂಚಿಸಲಾಗಿದೆ.**

1. ಪ್ರವೇಶ ಪರೀಕ್ಷೆ ಹಾಗೂ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಪರಿಸ್ಥಿತಿಯನ್ನು ಅವಲೋಕಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳತಕ್ಕದ್ದು;
2. Electronic Messaging Service ಮೂಲಕ ಜಾಗೃತಿ ಮೂಡಿಸುವ ಸುದ್ದಿಯನ್ನು ಪ್ರಚಾರ ಮಾಡಲು ಹಿರಿಯ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು;
3. ಸ್ವಯಂ ಸೇವಕರ ಗುಂಪುಗಳನ್ನು ರಚಿಸುವುದು; ಧ್ವನಿವರ್ಧಕದ ಮೂಲಕ ಅರಿವು ಮೂಡಿಸುವ ತಂಡವನ್ನು ರಚಿಸುವುದು;
4. ಹೆಚ್ಚಿನ ಸಂಖ್ಯೆಯಲ್ಲಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ತುರ್ತು ಸೇವೆಗಳಿಗೆ ನಿಯೋಜಿಸತಕ್ಕದ್ದು.
5. ತುರ್ತು ಮತ್ತು ಮುಖ್ಯವಾದ ಕೆಲಸವನ್ನು ನಿರ್ವಹಿಸಲು ಅನುಕೂಲವಾಗುವಂತೆ ಆಯಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು, ಕುಲಸಚಿವರು ಹಾಗೂ ಪಾಲಿಟೆಕ್ನಿಕ್/ಕಾಲೇಜುಗಳ ಪ್ರಾಂಶುಪಾಲರು ಪ್ರತಿ ದಿನವೂ ತಮ್ಮ ಸಂಸ್ಥೆಗಳಲ್ಲಿ ಹಾಜರಿರತಕ್ಕದ್ದು.
6. Covid-19 ವೈರಾಣು ತಡೆಗಟ್ಟಲು ಕುರಿತು ಸಮನ್ವಯ ಸಾಧಿಸಲು ತಮ್ಮ ಕಾಲೇಜುಗಳಲ್ಲಿ/ಶಿಕ್ಷಣ ಸಂಸ್ಥೆಗಳ ಮಟ್ಟದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸತಕ್ಕದ್ದು ಮತ್ತು ಅವರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿಯನ್ನು ರಾಜ್ಯಮಟ್ಟದ ನೋಡಲ್ ಅಧಿಕಾರಿಗೆ ಕಳುಹಿಸತಕ್ಕದ್ದು;
7. ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರು Covid-19 ವೈರಾಣು ತಡೆಗಟ್ಟುವ ಕುರಿತು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿರುತ್ತಾರೆ. ಸದರಿಯವರು ಅಗತ್ಯವಿರುವ ಬೋಧಕ ಸಿಬ್ಬಂದಿಗಳ ಸೇವೆಯನ್ನು ಬಳಸಿಕೊಂಡು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಇಲಾಖೆ/

ವಿಶ್ವವಿದ್ಯಾನಿಲಯ/ಸಂಸ್ಥೆಗಳಿಂದ Covid-19 ವೈರಾಣು ತಡೆಗಟ್ಟುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಂಡು ಬರುವ ಶಂಕಿತರ ವಿವರಗಳನ್ನು ಕ್ರೋಢೀಕರಿಸಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸತಕ್ಕದ್ದು;

8. ತಮ್ಮ ಅಧೀನಕ್ಕೊಳಪಡುವ ಕಛೇರಿ ಮತ್ತು ಸಂಸ್ಥೆಗಳ ಪ್ರವೇಶ ದ್ವಾರದಲ್ಲಿ ಸಾಬೂನು ಮತ್ತು ನೀರು ಮತ್ತು Sanitizer ವ್ಯವಸ್ಥೆ ಮಾಡುವುದು;
9. ಒಬ್ಬರನ್ನೊಬ್ಬರು ಪರಸ್ಪರ ಅಂತರ ಕಾಯ್ದುಕೊಳ್ಳುವುದು;
10. ಸೂಕ್ತ ಮಾರ್ಗದರ್ಶನ/ಸಹಾಯಕ್ಕಾಗಿ ಜಿಲ್ಲಾ ನಿಯಂತ್ರಣ ಕೊಠಡಿಯ Helpline ಅಥವಾ DISHA helpline 0471-2552056 ಅನ್ನು ಸಂಪರ್ಕಿಸಲು ಸಲಹೆ ಮಾಡುವುದು;
11. ಸಭೆ ಸೇರುವುದನ್ನು ಎಷ್ಟು ಸಾಧ್ಯವೋ ಅಷ್ಟು ತಪ್ಪಿಸಿ, ವಿಡಿಯೋ ಕಾನ್ಫರೆನ್ಸ್ ಅಥವಾ ಆನ್‌ಲೈನ್ ಮೂಲಕ ವಿಷಯ ಹಂಚಿಕೆಗಳನ್ನು ಹಾಗೂ ಪ್ರಗತಿ ಪರಿಶೀಲನೆಯನ್ನು ನಡೆಸುವುದು;
12. ಅಗತ್ಯ ಸಂದರ್ಭದಲ್ಲಿ ಸ್ವಯಂ ಸೇವಕರಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳ ವಿವರ (ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ಐಡಿ)ಯನ್ನು ಸಿದ್ಧಪಡಿಸಿಕೊಳ್ಳತಕ್ಕದ್ದು;
13. ತುರ್ತು ಸಂದರ್ಭದಲ್ಲಿ ನಿಯೋಜಿಸಲು ವಾಹನ ಮತ್ತು ಚಾಲಕರ ಸಂಖ್ಯೆಯ ವಿವರವನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದ್ದು;
14. ತಮ್ಮ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅತಿಥಿ ಗೃಹ, ಕಛೇರಿ, ಶಾಲೆಗಳು, ಕಾಲೇಜುಗಳಲ್ಲಿ ಸ್ನಾನದ ಕೋಣೆಗಳೊಂದಿಗೆ ಪ್ರತ್ಯೇಕ ಕೊಠಡಿಗಳಿರುವ ಕಟ್ಟಡಗಳ ವಿವರಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳತಕ್ಕದ್ದು ಮತ್ತು ಅತ್ಯಂತ ತುರ್ತು ಸಂದರ್ಭದಲ್ಲಿ ಆ ಕೊಠಡಿಯನ್ನು ತಲುಪಲು ಹಾಗೂ ಅದರ ಬೀಗದ ಕೈಗಳನ್ನು ನೀಡಲು ವ್ಯಕ್ತಿಯನ್ನು ಗುರುತಿಸತಕ್ಕದ್ದು;
15. ವೈರಾಣು ತಡೆಗಟ್ಟಲು ಅನುಸರಿಸಬೇಕಾದ ಕ್ರಮ ಮತ್ತು ಅನುಸರಿಸಲು ಯೋಗ್ಯವಲ್ಲದ ಕ್ರಮಗಳ ಬಗ್ಗೆ ಹಾಗೂ ಇತರ ಜಾಗೃತಿ ಕ್ರಮಗಳನ್ನು ತಿಳಿಸುವ ವಸ್ತುಗಳನ್ನು ಇರಿಸಿರುವ ಡ್ರಾಪ್ ಬಾಕ್ಸ್ ವಿಳಾಸವನ್ನು ನಮೂದಿಸತಕ್ಕದ್ದು;
16. ಹೆಸರು, ದೂರವಾಣಿ ಸಂಖ್ಯೆ, ಇ-ಮೇಲ್ ಐಡಿ/ವಾಟ್ಸ್‌ಆಪ್ ಸಂಪರ್ಕ ಸಹಿತ 2ನೇ ಮತ್ತು 3ನೇ ಹಂತರ ಸಿಬ್ಬಂದಿಗಳ ಪಟ್ಟಿಯನ್ನು ಸಿದ್ಧಪಡಿಸಿ ಅವರಿಗೆ ವೈರಾಣು ತಡೆಗಟ್ಟುವ ಸೇವೆಯ ಪ್ರಮುಖ ಜವಾಬ್ದಾರಿಗಳನ್ನು ವಹಿಸತಕ್ಕದ್ದು.

23/3/2020

ಕುಲಸಚಿವ

**ಇವರಿಗೆ:**

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗ/ಸಂಸ್ಥೆಗಳು, ಮಾಗಂ ಮೈಸೂರು.
2. ಎಲ್ಲಾ ಅಂಗ ಸಂಸ್ಥೆಗಳ ನಿರ್ದೇಶಕರು/ಸಂಯೋಜನಾಧಿಕಾರಿಗಳು, ಮೈವಿವಿ, ಮೈಸೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಹಾಸನ/ಮಂಡ್ಯ ಮತ್ತು ಚಾಮರಾಜನಗರ.
4. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರಾಂಶುಪಾಲರು, ಮಹಾರಾಜ/ಯುವರಾಜ/ವಿವಿ ಸಂಜೆ ಕಾಲೇಜು/ಲಲಿತ ಕಲಾ ಕಾಲೇಜು, ಮೈವಿವಿ, ಮೈಸೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ, ಮೈವಿವಿ, ಮೈಸೂರು.
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಅಧೀನಕ್ಕೊಳಪಡುವ ಎಲ್ಲಾ ಕಾಲೇಜುಗಳು.
9. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ (ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರುಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.
12. ಕಛೇರಿ ಪ್ರತಿ.